ಎಲ್ಲಿರುತ್ತದೆ? ಈ ಸರಳ ಸತ್ಯವು ಆತನಿಗೆ ಗೊತ್ತು. ಕಲ್ಯಾಣವು ಇಂದು ಕೆನ್ನೀರು ಸುರಿಸುತ್ತಿದೆ. ಅದನ್ನು ಕಂಡು ಬಸವಣ್ಣನ ಹೃದಯ ಮರುಗುತ್ತಿದೆ. ಆತನಿಗೆ ಮನುಷ್ಯನ ಮೂಲ ಪ್ರವೃತ್ತಿಯು ಜ್ಞಾಪಕಕ್ಕೆ ಬರುತ್ತಿದೆ. 'ರಕ್ತದ ರುಚಿ ಮನುಷ್ಯರ ಆದಿಮ ನೆನಪು. ಅದನ್ನು ಬಿಟ್ಟು ಹೊರಬರಲಾರರೇನೋ' ಹೀಗೆ ಬಸವಣ್ಣ ತನ್ನ ಸೋದರಿಯ ಸಂಗಡ ಮಾತನಾಡುವಾಗ ಆತ್ಮಪರೀಕ್ಷೆಗೆ ಒಳಪಡುವನು.

ಬಸವಣ್ಣ ತೀವ್ರ ದುಃಖಿಯಾಗಿರುವನು. ಯಾವ ಕೈಯಿಂದ ಮಕ್ಕಳಿಗೆ ಆಶೀರ್ವಾದ ಮಾಡಬೇಕಿತ್ತೋ ಅದೇ ಕೈಯಿಂದ ಮಣ್ಣು ಹಾಕುವ ಸರದಿ! ಪರಸ್ಪರ ಇಷ್ಟಪಟ್ಟ ಹರಳಯ್ಯ ಮಧುವರಸರ ಮದುಮಕ್ಕಳು. ಅವರ ಹತ್ಯೆಯೆಂದರೆ ಅದು ಪ್ರೇಮದ ಹತ್ಯೆಯೂ ಹೌದು. ಮೌಲ್ಯದ ಕೊಲೆಯೂ ಸರಿ! ಅವರ ಪ್ರೇಮ ಚಿಗುರಲು ಜೇನು ನೊಣಗಳ ಪ್ರಸಂಗವನ್ನು ನಾಟಕಕ್ಕೆ ಪೂರಕವಾಗಿ ಹೆಣೆಯಲಾಗಿದೆ. ಇದನ್ನು ಒಂದು ತಂತ್ರವಾಗಿ ವಿಸಾಜಿ ಬಳಸಿದ್ದಾರೆ. ಅಧಿಕಾರಶಾಹಿ ಅವರನ್ನು ಹೊಸಕಿ ಹಾಕಿದೆ. ಒಂದೊಂದಾಗಿ ಹೀಗೆ ಕಲ್ಯಾಣದ ಕನಸುಗಳು ಕಮರಿ ಹೋಗುತ್ತಿವೆ. ಬಸವಣ್ಣ ಆ ರಾತ್ರಿ ಮಹಾಮನೆಯ ಉಪ್ಪರಿಗೆಯ ಮೇಲಿಂದ ಕಲ್ಯಾಣಪುರವನ್ನು ನೋಡುವ ನಾಟಕದ ಪ್ರಸಂಗ ರೂಪಕಾತ್ಮಕವಾಗಿದೆ. ಅದು ಅದರ ಅಧಃಪತನದ ದಿಕ್ಸೂಚಿಯಂತೆ ಮೂಡಿದೆ. 'ಕಲ್ಯಾಣಪುರವು ದಟ್ಟವಾದ ಕತ್ತಲೆಯೊಡನೆ ಹೋರಾಡಲು ಸಾಧ್ಯವಾಗದ ಅಸಹಾಯಕತೆಯಿಂದ ನರಳುತ್ತಿತ್ತು. ಇಡೀ ಪಟ್ಟಣ ದಾಳಿ ಮಾಡುವ ಚಿರತೆಯ ಕಳ್ಳ ಹೆಜ್ಜೆಯಂತೆ ತೋರುತ್ತಿತ್ತು. ಆ ಚಿರತೆಯ ಹೆಜ್ಜೆ ಸಪ್ಪಳವನ್ನು ನಾನು ಆಲಿಸಿದ್ದೆ. ಅದರ ಬಾಯಿಯಲ್ಲಿ ಎಳೆಯ ಮದುಮಕ್ಕಳ ರಕ್ತವಿತ್ತು. ಅದರ ಕಣ್ಣಲ್ಲಿ ಸುಡುತ್ತಿರುವ ಕಲ್ಯಾಣದ ಬೆಂಕಿಯಿತ್ತು' ಬಸವಣ್ಣ ಹೇಳುವ ಈ ಸಾಲುಗಳು ಕನಸು ಮತ್ತು ವಾಸ್ತವನ್ನು ದರ್ಶಿಸುತ್ತವೆ.

ಬಸವಣ್ಣ ಈಗ ಏಕಾಂಗಿ. ಆತನ ಮನೆಯ ದೀಪಕ್ಕೆ ಎಣ್ಣೆಯಿಲ್ಲ. ಅದು ನಂದಿ ಹೋಗುವ ಕಾಲ ಸನ್ನಿಹಿತವಾಗಿದೆ. ಇದು ಅಂತ್ಯದ ದಿಕ್ಸೂಚಿಯಂತಿದೆ. ನೀಲಾಂಬಿಕೆ ಹೊರಡಲು ಕರೆಯುತ್ತಾಳೆ. ಆದರೆ, ಮನೆ ಬಿಟ್ಟು ಬರಲು ಬಸವಣ್ಣ ಸಿದ್ಧನಿಲ್ಲ. 'ಕಲ್ಯಾಣ ನನ್ನ ಬದುಕಿನ ಕೊನೆಯ ತಾಣ. ಇಂಥ ಕಲ್ಯಾಣವನ್ನು ತೊರೆಯುವುದು ನನ್ನಿಂದ ಸಾಧ್ಯವಿಲ್ಲ' ಎನ್ನುವನು. ಕಾಯಕದ ಆ ಮಣ್ಣಿನ ಸಂಬಂಧವನ್ನು ಅಷ್ಟು ಸುಲಭವಾಗಿ ಆತನಿಗೆ ಕಡಿದುಕೊಳ್ಳುವುದು ಸಾಧ್ಯವಿಲ್ಲ. ಮಡಿವಾಳ ಮಾಚಿದೇವರು, ಚೌಡರಸರು, ಏಕಾಂತ ರಾಮಯ್ಯ, ಕನ್ನದ ಬ್ರಹ್ಮಯ್ಯ, ಮಸಣಯ್ಯ, ಗಂಗವ್ವ, ಅಕಮ್ಮ-ಎಲ್ಲರೂ ಊರು ತ್ಯಜಿಸಿದ್ದಾರೆ. 'ನೀಲಾ ನೀನು ಹೊರಡು. ಪ್ರಳಯಕ್ಕೂ ಎಲ್ಲವನ್ನೂ ನಾಶ ಮಾಡುವ ಶಕ್ತಿಯಿಲ್ಲ. ಅಂತ್ಯದಲ್ಲೂ ಅಸ್ತಿತ್ವ ಉಳಿಸಿಕೊಳ್ಳುವ ಅದೆಷ್ಟೋ ಜೀವಾಣುಗಳಿವೆ. ನೆನಪುಗಳೇ ಕಲ್ಯಾಣದ ಭರವಸೆ. ನೀನು ಹೊರಡು ನೀಲಾ. ಹೊಸ ಕಲ್ಯಾಣಕ್ಕಾಗಿ ಹಂಬಲಿಸುತ್ತ ನಾನಿಲ್ಲೇ ಉಳಿಯುವೆ' ಎನ್ನುವನು. ಕಲ್ಯಾಣದ ಚಳವಳಿಯ ಫಲ– ನಿಷ್ಫಲದ ಸಂಪೂರ್ಣ ಹೊಣೆಯನ್ನು ಬಸವಣ್ಣ ಹೊತ್ತಂತಿದೆ. ಈ ಮಾತಿನೊಂದಿಗೆ ನಾಟಕ ಹೊಸ ಭರವಸೆಯ ದೀಪ ಬೆಳಗಿಸಿ ಕೊನೆಗೊಳ್ಳುತ್ತದೆ.

ಈ ನಾಟಕದಲ್ಲಿ ಪ್ರತಿಮೆ, ರೂಪಕ ಮತ್ತು ನುಡಿಗಟ್ಟುಗಳು ಅಲ್ಲಲ್ಲಿ ಬಳಕೆಗೊಂಡಿದ್ದು ಇದರ ಶಕ್ತಿ. ಬಸವಣ್ಣನ ಮಹಾಮನೆಯಲ್ಲಿ ಇಡೀ ನಾಟಕ ಜರುಗುತ್ತದೆ. ರಾಜಸತ್ತೆಯ ಮೇಲೆ ವೈದಿಕಶಾಹಿಯ ಒತ್ತಡಗಳಿವೆ. ಅದರಿಂದ ಬಿಜ್ಜಳ, ಸೋವಿದೇವರ ನಡೆಗಳು ಪ್ರಭಾವಿಸಿವೆ. ಕಲ್ಯಾಣದಲ್ಲಿ ಹೊಸ ಸಮಸಮಾಜದ ವಿರುದ್ಧ ಒಂದು ಷಡ್ಯಂತ್ರವೇ ನಡೆಯುತ್ತದೆ. ಅದು ಒಂದು ಆಂತರ್ಯದ ಧಾರೆಯಾಗಿ ಜನ್ಮತಾಳುತ್ತದೆ. ಅದು ಅಗೋಚರವಾಗಿ ಅಮೂರ್ತ ರೂಪದಲ್ಲಿ ನಾಟಕದೊಳಗೆ ಹರಿಯುತ್ತದೆ. ಇದುವೇ ಈ ನಾಟಕದ ರಚನಾ ವಿನ್ಯಾಸದ ಹೆಗ್ಗಳಿಕೆ.

ಬಹಳಷ್ಟು ಪ್ರಸಂಗಗಳು ಘಟಿಸಲು ಅವಕಾಶಗಳಿದ್ದವು. ಆದರೆ, ಅವುಗಳನ್ನು ಪಾತ್ರಗಳ ಮಾತುಗಳಲ್ಲಿ ಕಟ್ಟಲಾಗಿದೆ. ಒಂದು ಪಕ್ಷ ಅವು ಘಟಿಸಿದ್ದರೆ ಪ್ರಯೋಗಕ್ಕೆ ಆಯಾಮಗಳು ದಕ್ಕುತ್ತಿದ್ದವು. ಸಂಘರ್ಷ ಹುಟ್ಟಿ ನಾಟಕೀಯತೆ ದೊರಕುತ್ತಿತ್ತು. ಇದೊಂದು ಕೊರತೆಯಾಗಿ ಕಾಡುತ್ತದೆ. ಇದು ಈಗ ನಿರ್ದೇಶಕರಿಗೆ ಸವಾಲು. ಅವರು ಮುರಿದು ಕಟ್ಟುವ ಮೂಲಕ ನಾಟಕಕ್ಕೆ ಹೊಸ ಆಯಾಮವನ್ನು ರಂಗದ ಮೇಲೆ ನೀಡಬಹುದೆನಿಸುತ್ತದೆ. ●